Reg no KRNN 12 - For Influential Publicity - 20-10-76

ಸ್ವರ್ಣ ಮಹೋತ್ಸವ ನೇರವೇರಿಸಿ ವಜ್ರಮಹೋತ್ಸವ ನೇರವೇರಿಸಲಿರುವ ಪತ್ರಿಕೆ

ಸತ್ಯವಾದಿ
SATYAVADI

60th Diamond Jubilee Year
60 ನೇ ವಜ್ರಮಹೋತ್ಸವ ವರ್ಷ
★ Satyavadi Daily. Mysore 4 ★

ಸ್ಥಾಪಕರು : ಅರಮನೆ ಏರಸ್ತೇದಾರ್ ಎಂ ವಿ ಸುಬ್ಬರಾವ್ ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್

ಪಾಸಿಂಗ್ ಔಟ್ ಪೆರೇಡ್

ಮೈಸೂರು — 14ನೇ ತಂಡದ ಸಬ್ ಇನ್‌ಸ್ಪೆಕ್ಟರ್‌ಗಳ ಪಾಸಿಂಗ್ ಔಟ್ ಪೆರೇಡ ನಲ್ಲಿ ಸೆಲ್ಯೂಟ್ ಸ್ವೀಕರಿಸಿದ ಐ.ಜಿ.ಪಿ ಶ್ರೀ ಎ ಎಸ್ ರಂಗ್‌ರವರು, ಸಂಕಟದಲ್ಲಿರುವ ಜನರಿಗೆ ಸಹಾಯ ಮಾಡಲು ಕರೆ ಕೊಟ್ಟರು.

★

4 ಮಕ್ಕಳ ಮರಣ

ಕಿಂಗ್‌ಸ್ಟನ್ — ಒಂದು ಕ್ರೀಡಾಂಗಣದಲ್ಲಿ ಏಕಾಏಕಿ ಭಾರಿ ಮಳೆ ಆಗಲು, ಆದ ಓಡಾಟದಲ್ಲಿ 4 ಮಕ್ಕಳು ಮೃತದಿಂದ ಪತ್ರವು ನೂರು ಮಂದಿ ಗಾಯಗೊಂಡರು.

●

ಡಾಕ್ಟರ ಬಳಿ ಧನ

ಪುಣೆ — ಆದಾಯ ತೆರಿಗೆ ಅಧಿಕಾರಿಗಳವರು ಬಾಗಿಲು ತಟ್ಟಿದಾಗ ಒಬ್ಬ ಡಾಕ್ಟರು ನೂರು ರೂಪಾಯಿ ನೋಟುಗಳನ್ನು ಬೀರಿ ಕಡೆಯಿಂದ ತನ್ನ ಹೆಣ್ಣಾಳಿನ ಕಡೆ ಎಸೆಯುತ್ತಿದ್ದುದನ್ನು ಕಂಡು ಅಧಿಕಾರಿಗಳವರು ಅವಳಿಂದ 8 ಸಾವಿರ ರೂ ವಶಪಡಿಸಿಕೊಂಡಿದ್ದರು ಟೇಬಲ್ ಕಾಲಿನೊಳಗೆ ಡಾಕ್ಟರ್ ಮುಚ್ಚಿಟ್ಟಿದ್ದ ಧನ ವಶಪಡಿಸಿಕೊಂಡರು ಮುಚ್ಚಿಟ್ಟಿರುವ ವರ ಮಾನ 5 ಲಕ್ಷ ಪಡೆವ ನೀರೀಕ್ಷೆ ಇದೆ.

★

ಕೇಂದ್ರದ ಕುತೂಹಲ

ನವ ದೆಹಲಿ — ಮಹಾರಾಷ್ಟ್ರ, ಕರ್ನಾಟಕಕ್ಕೆ ಅಕ್ಷೇಪಾರ್ಹವಾಗದ ರೀತಿಯಲ್ಲಿ ಗಡಿ ವ್ಯಾಜ್ಯ ಪರಿಹಾರ ಕಂಡುಹಿಡಿಯುವ ಕುರಿತು ಭಾರತೆ ಸರ್ಕಾರ ಕುತೂಹಲಗೊಂಡಿದೆ ಎಂದು ಒಳಾಡಳಿತ ಸಚಿವರಾದ ಶ್ರೀ ಬ್ರಹ್ಮಾನಂದರೆಡ್ಡಿಯವರು ತನ್ನ ಸಚಿವಾಲಯದ ಪಾರ್ಲಿಮೆಂಟ್ ಸದಸ್ಯರ ಸಲಹಾ ಸಮಿತಿಯಲ್ಲಿ ಭರವಸೆ ನೀಡಿದರು.

ತಕ್ಕಡಿಯ ವಶ

ನಾಗರ — ಕಳೆಯ ನೇತರನ್ನು ಹೆಚ್ಚಾದ ದರ ಕೊಟ್ಟು ಕೊಳ್ಳುತ್ತಿದ್ದ ಶಂಕರಪ್ಪನವರ ಮೋಸದ ತೂಕದ ತಕ್ಕಡಿಯನ್ನು ವಶಪಡಿಸಿಕೊಂಡು ತೂಕ ಮತ್ತು ಅಳತೆಯ ಅಧಿಕಾರಿಗಳಲ್ಲಿ ಪ್ರದರ್ಶಿಸಲಾಗಿದೆ. ಪಡೆಲಿಸಿದರೆ ಸಮನಾಗಿದ್ದ. ಒತ್ತಿ ಹಿಡಿದರೆ ಬೇಕಾದಷ್ಟು ತೂಗಿದರು ಗೊತ್ತಾಗದಂತೆ ಇದೆ ಈ ತಕ್ಕಡಿ.

○

ದರ ಇಳಿಸುವಂತೆ ಕೂಗು

ಬೆಂಗಳೂರು — ರಾಜ್ಯದ ಅದ್ಯಂತ ದರ್ಜಿಗಳು ತೆಗೆದುಕೊಳ್ಳುತ್ತಿರುವ ಹೆಚ್ಚಿನ ದರವನ್ನು ಕಡಿಮೆ ಮಾಡಬೇಕೆಂಬ ಕೂಗು ಹೆಚ್ಚಾಗಿದೆ. 2 ಲಕ್ಷಗಳಿಗೂ ಹೆಚ್ಚಾಗಿ ದರ್ಜಿಗಳಿದ್ದು, ಹೊಲಿಗೆ ದರ ನಿಷ್ಕರ್ಷಿಸುವದಲ್ಲದೆ. ತಮಗೂ ಅಯಾಯ ಬಟ್ಟೆಯ ಹೊಲಿಗೆಯ ದರಗಳನ್ನು ನಿಷ್ಕರ್ಷೆ ಮಾಡಬೇಕೆಂದು ರಾಜ್ಯದ ದರ್ಜಿ ಕೆಲಸಗಾರರ ಸಂಘ ಅಧಿಕಾರಿಗಳನ್ನು ವಿನಂತಿಸಿದೆ.

ಭಕ್ತಿ
ರೇನ್ ಕೋಟುಗಳಿಗೆ
ಬ್ಯಾಂಕ್ ರೋಡ್ ಬಾಹುಸಾರ್
A Firm known for
Genuine Good Business

ಫೆನವಾದ ಕಾರ್ಯಗಳನ್ನು ಅತಿ ಜಾಗ್ರತೆಯಲ್ಲಿ ಮಾಡುವುದು ಅತ್ಯಾವಶ್ಯಕ

— ಶ್ರೀ ಅಂವಿಂದೋ

ಮೈಸೂರು ದಸರಾ ವಸ್ತುಪ್ರದರ್ಶನ

ಮೈಸೂರು ದಸರಾ ಕೈಗಾರಿಕೆ ಮತ್ತು ಸಾಂಸ್ಕೃತಿಕ ವಸ್ತುಪ್ರದರ್ಶನವನ್ನು ಇನ್ನು ಮುಂದೆ ಶುಕ್ರವಾರ, ಶನಿವಾರ ಮತ್ತು ಭಾನುವಾರಗಳಲ್ಲಿ ಮತ್ತು ರಜಾ ದಿನಗಳಲ್ಲಿ ಬೆಳಿಗ್ಗೆ 9 ರಿಂದ 12 ರ ವರೆಗೂ ಮಧ್ಯಾಹ್ನ 3 ರಿಂದ ರಾತ್ರಿ 9 ವರೆ ವರೆಗೂ ಮತ್ತು ಉಳಿದ ದಿನಗಳಲ್ಲಿ ಮಧ್ಯಾಹ್ನ 3 ಗಂಟೆಯಿಂದ ತೆರೆದಿರಲಾಗುವುದಾಗಿಯೂ ವಸ್ತುಪ್ರದರ್ಶನದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಿ. ಪಿ ಲಿಂಗಯ್ಯನವರು ತಿಳಿಸಿರುವರು

22 ರ ಪ ಜೆ 6 ಅರ್. ನರಹರಿ ಮತ್ತು ಕೃಷ್ಣ ಅವರಿಂದ ಹಾಡುಗಾರಿಕೆ 7 ಗಂಟೆಗೆ ನ್ಯಾಯೋಂಗ ಇಲಾಖೆಯವರಿಂದ ದೇವದಾಸಿ ನಾಟಕ 23 ರ ಸಂಜೆ 6 ಗಂಟೆಗೆ ಎಂ ಪಿ ಮೋಹನ್‌ರವರಿಂದ ಹಾಡುಗಾರಿಕೆ 7 ಗಂಟೆಗೆ ಹನುಮಂತಾಚಾರ್ ರವರಿಂದ ಯೂನಿವಾರ್ಸ್ ವಾದನ 24 ರ ಸಂಜೆ 6 ಶ್ರೀಮತಿ ಕೃಷ್ಣವೇಣಿಯವರಿಂದ ಹಾಡುಗಾರಿಕೆ 7 ಗಂಟೆಗೆ ಟಿ ಎಂ ಪೌಂದರ್‌ರಾಜನ್ ಸ್ಟೇಟ್

ಮುಂದಿನ ವರ್ಷದಿಂದ ದಸರಾ ಸಮಿತಿ ನಡೆಸುವ ವ್ಯಾಯಾಮ ಸ್ಪರ್ಧೆಯಲ್ಲಿ ರಾಷ್ಟ್ರೀಯ ದಾಖಲೆ ಮುರಿಯುವವರಿಗೆ ರೂ 500 ಮತ್ತು ರಾಜ್ಯದ ದಾಖಲೆ ಮುರಿಯುವವರಿಗೂರೂ 500 ಬಹುಮಾನ ಕೊಡಲು ಅರವಿಂದ ಪರಿಮಳ ವರ್ಕ್ಸ್ ಶ್ರೀ ಹೆಚ್. ಸುಬ್ಬರಾವ್‌ರವರು 1 ಸಾವಿರ ರೂ. ಬಹುಮಾನ ಘೋಷಿಸಿರುವುದಾಗಿ ಪ್ರಧಾನ ಕಾರ್ಯದರ್ಶಿ ಶ್ರೀ ಡಿ ಜಯದೇವರಾಜ ಅರಸ ರವರು ತಿಳಿಸಿದ್ದಾರೆ.

○

ಕೇರಳದಲ್ಲಿ ತೆಗೆದುಕೊಳ್ಳುವ ಬಡ್ಡಿಯ ದರ

ತಿರುವೆಂಡ್ರಂ — ಕೇರಳದ ಕೆಲವು ಲೇವಾದೇವಿ ನಡೆಸುವವರು ಶೇಕಡ 3 ಪಟ್ಟಿನ ದರವರೆಗೆ ಬಡ್ಡಿ ತೆಗೆದುಕೊಳ್ಳುವರೆಂದು. ಅತಿ ಕನಿಷ್ಠ ಬಡ್ಡಿ ಶೇಕಡ 60 ಎಂದು ಕಂದಾಯ ಮಂತ್ರಿ ಶ್ರೀ ಬೇಬಿ ಜಾನ್ ಶಾಸನ ಸಭೆಯಲ್ಲಿ ತಿಳಿಸಿದರು ಅದುದರಿಂದ ಪಟ್ಟಕಾರ ಸಂಘಗಳು ತೆಗೆದುಕೊಳ್ಳುವ ಶೇಕಡ 12 ಬಡ್ಡಿ ಏನೂ ಅಲ್ಲವೆಂದು, ಶೇಕಡ 14 ಸುಸ್ತಿ ಬಡ್ಡಿ ಲೆಕ್ಕಿಸತಕ್ಕದ್ದಲ್ಲವೆಂದು ತಿಳಿಸಿದರು.

★

ಮಳೆಗಾಗಿ ಗುಲ್ಬರ್ಗದಲ್ಲಿ ಪ್ರಾರ್ಥನೆ

ಗುಲ್ಬರ್ಗ — ಮಳೆಯ ದೇವರು ವರುಣನ ಅನುಗ್ರಹ ಪಡೆದು ಅನಾವೃಷ್ಟಿ ಪೀಡಿತ ಜಿಲ್ಲೆಗೆ ಮಳೆ ಬರಿಸಲು ಶ್ರೀ ಸತ್ಯನಾರಾಯಣಸ್ವಾಮಿಗೆ ಪ್ರಾರ್ಥಿಸಲು ಅಧಿಕಾರಿಗಳ ನೇತೃತ್ವವನ್ನು ಜಿಲ್ಲಾಧಿಕಾರಿಯವರು ವಹಿಸಿದ್ದರು ಭಜನೆ ಮಂಡಲಿಗಳಿಂದ ಭಜನೆ, ಪೂಜಾರಿಗಳಿಂದ ಮಂತ್ರ ಪಠಣೆ ನಡೆಯಿತು.

ಹಜರತ್ ಖಾಜಾ ಬಂದ ನವಾಬ್‌ರ ದರ್ಗದಲ್ಲಿ ಮಳೆಗಾಗಿ ಪ್ರಾರ್ಥನೆ ನಡೆಯಿತು

○

ನ್ಯಾಷನಲ್ ಡಿಫೆನ್ಸ್ ಫಂಡ್‌ಗೆ ತಮ್ಮ ನಿವೃತ್ತಿ ಕಾಲದ ವರೆಗೆ 5 ವರ್ಷಗಳ ಕಾಲ ಪ್ರತಿ ತಿಂಗಳು ತಮ್ಮ ವೇತನದ ಒಂದು ದಿನದ ಹಣವನ್ನು ಕೊಟ್ಟ ಕೊಲ್ಹೇಪುರಿಗಾಲದ ಮಹದೇಶ್ವರ ಕಾಲೇಜಿನ ಲೆಕ್ಚರರ್ ಶ್ರೀ ಮಾಹದೇವಯ್ಯನವರ ಕುರಿತು ಮುಖ್ಯ ಮಂತ್ರಿ ಶ್ರೀ ಡಿ ದೇವರಾಜ ಅರಸ್‌ರವರು ಪ್ರಶಂಸಿಸಿರುವರು.

ಪುನಃ ಗೋವಿನ ಕಸಾಯಿಖಾನೆಗೆ ಸಿದ್ಧತೆ

ನಗರದ ಮಹದೇವಪುರ ರಸ್ತೆಯಲ್ಲಿ ಉದಯಗಿರಿ ಬಡಾವಣೆಗೆ ಸಮೀಪವಾಗಿ "ಗೋಮಾಂಸದ ಕಸಾಯಿಖಾನೆ" ಒಂದನ್ನು ಸ್ಥಾಪಿಸಲು ಮೈಸೂರು ಪೌರಸಭೆ ನೂರು ವರ್ಷಗಳ ಹಿಂದೆ ಒಂದು ಕಟ್ಟಡ ಕೂಡಾ ನಿರ್ಮಿತವಾಗಿರುವುದು ಸರಿಯಷ್ಟೇ; ಇಲ್ಲಿನ ನಿವಾಸಿಗಳ ಆರೋಗ್ಯ ಪ್ರದೇಶದ ನೈರ್ಮಲ್ಯಪಾಲನೆ ಧಾರ್ಮಿಕ ಭಾವನೆಗಳಿಗೆ ಉಂಟಾಗಿರುವ ಭಂಗ ಮುಂತಾದ ಕಾರಣಗಳಿಂದ ಈ ಕಸಾಯಿಖಾನೆಯು ಸ್ಥಾಪಿತವಾಗಕೂಡದೆಂದು ಉದಯಗಿರಿ ಬಡಾವಣೆ ಹಾಗೂ ಕ್ಯಾತಮಾರನಹಳ್ಳಿಯ ನಿವಾಸಿಗಳು ಅಂದೇ ಪ್ರತಿಭಟನೆ ಸಲ್ಲಿಸಿದ್ದರೂ ಅದು ಅರಣ್ಯರೋಧನವಾಗಿ ಕಸಾಯಿಖಾನೆಯ ಸ್ಥಾಪನೆಗೆ ಸಿದ್ಧತೆಗಳು ನಡೆಯತೊಡಗಿದವು.

ಈಗ ಹಲವಾರು ರಾಜ್ಯಗಳು ಗೋಹತ್ಯೆಯನ್ನು ನಿಷೇಧಿಸಿದ್ದು ಕೇಂದ್ರ ಸರ್ಕಾರ ಕೂಡಾ ಈ ಬಗ್ಗೆ ಕ್ರಮ ಕೈಗೊಳ್ಳುವ ಭರವಸೆ ನೀಡಿರುವ ಈ ಸಮಯದಲ್ಲಿ ಈ "ಗೋಮಾಂಸದ ಕಸಾಯಿಖಾನೆ" ಆರಂಭವಾಗಲು ಸರ್ಕಾರ ಅವಕಾಶ ನೀಡಿದಲ್ಲಿ ಅದೊಂದು ವಿರ್ಯಾಸವಾದೀತು!

ಆದ್ದರಿಂದ ಈ ಕಸಾಯಿಖಾನೆಯ ಸ್ಥಾಪನೆಯನ್ನು ಸಂಬಂಧಿಸಿದವರು ಈಗಲಾದರೂ ಕೈಬಿಟ್ಟು, ಆ ಕಟ್ಟಡವನ್ನು ಈ ಮುಂಚೆಯೇ ವಿನಂತಿಸಿದ್ದಂತೆ ಯಾವುದಾದರೂ ಶಾಲೆಗೋ ಪಶುವೈದ್ಯಶಾಲೆಗೋ ಅಥವಾ ಒಂದು ಕೈಗಾರಿಕೆಗೋ ನೀಡುವ ಮೂಲಕ ಜನೋಪಯೋಗಿ ಕಾರ್ಯ ಕೈಗೊಳ್ಳುವರೆಂದು ಆಶಿಸೋಣವೆ?

ಮೊಹಲ್ಲಾ ನಿವಾಸಿಗಳು

[ಈಜಿಗೆ ಮೈಸೂರು ಪತ್ರಿಕೆಯಲ್ಲಿ ವಾಚಕರ ಪತ್ರವಾಗಿ ಪ್ರಕಟವಾಗಿದ ಲೇಖನವಿದು-]

ವುಡ್‌ಲಾಂಡ್ಸ್ 15 10 76 ರಿಂದ

ಅವೋಘ ಆರಂಭ

ಮಾ

ಹಿಂದಿ

ಕಲರ್

ಧರ್ಮೇಂದ್ರ ಹೇಮಮಾಲಿನಿ ಅಭಿನಯ

ದಿನ 4 ಪ್ರದರ್ಶನಗಳು

ಅಪೆರಾ 15 10 76ರಿಂದ

ಕುಮಾರ ವಿಜಯಂ

ಕಮಲಾ ಹಾಸನ್ ಜಯಚಿತ್ರ ಅಭಿನಯ

ತಮಿಳು ಪ್ರತಿ ದಿನ 3 ಪ್ರದರ್ಶನಗಳು

Contribute Liberally to the National Defence Fund

SHAKTI SUDHA

A Superb Tonic

"ಸತ್ಯವಾದಿ" ವಜ್ರಮಹೋತ್ಸವ

ಭಗವಂತನ ಕೃಪೆಯಿಂದ "ಸತ್ಯವಾದಿ" ಯು 60 ನೇ ವರ್ಷ ಅರ್ಥಾತ್ ವಜ್ರಮಹೋತ್ಸವ ವರ್ಷವನ್ನು ಪ್ರವೇಶಿಸಿರುವುದೆಂಬುದನ್ನು ತಿಳಿಸಲು ಹರ್ಷಿಸುತ್ತೇವೆ.

ಸ್ವರ್ಣಮಹೋತ್ಸವ ಕಾಲದಲ್ಲಿ ದೊರೆತ ಶ್ರೀ ಜಗದ್ಗುರುಗಳವರ, ಶ್ರೀ ಸ್ವಾಮಿಗಳವರ ಆಶೀರ್ವಾದ ಅನುಗ್ರಹವನ್ನು, ಉದಾರತೆಯಿಂದ ಕೂಡಿದ ಮಹನೀಯರ ನೆರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಂಡು, ರಾಜ್ಯದ ಪ್ರಸ್ತುತ ವಜ್ರಮಹೋತ್ಸವದ ಯಶಸ್ವಿ ನೆರವೇರುವಿಕೆಗೆ ಪೂರ್ಣ ಸಹಾಯ ದೊರೆಯುವುದೆಂಬ ವಿಶ್ವಾಸ ಹೊಂದಿದ್ದೇವೆ

Edited Printed and Published by Dharmaprachararanirata M S. Krishna Rao (Proprietor) at the Satyavadi Press, Chamarajapuram Mysore 4

Protect the Cow